ವಿಜಯ ಕರ್ನಾಟಕ

ಅಖಿಲ ಭಾರತ ಅಂತರ್‌ವಿವಿ ಬಾಸ್ಕೆಟ್‌ಬಾಲ್ ಚಾಂಪಿಯನ್‌ಷಿಪ್

# ಬಾಸ್ಕೆಟ್‌ಬಾಲ್: ಜೈನ್ ವಿವಿಗೆ ಸಮಗ್ರ ಪ್ರಶಸ್ತಿ



**ಬಾಸ್ಕೆಟ್‌ಬಾಲ್ ಚಾಂಪಿಯನ್‌ಷಿಪ್ ಪ್ರಶಸ್ತಿ ಗೆದ್ದುಕೊಂಡ ಜೈನ್ ವಿಶ್ವವಿದ್ಯಾನಿಲಯದ ಪುರುಷ ಹಾಗೂ ಮಹಿಳಾ ತಂಡ**

■ **ವಿಕ ಸುದ್ದಿಲೋಕ** ಬೆಂಗಳೂರು

ಚೆನ್ನೈನಲ್ಲಿ ನಡೆದ ಅಖಿಲ ಭಾರತ ಅಂತರ್ ವಿಶ್ವವಿದ್ಯಾನಿಲಯ ಬಾಸ್ಕೆಟ್‌ಬಾಲ್ ಚಾಂಪಿಯನ್‌ಷಿಪ್‌ನಲ್ಲಿ ಬೆಂಗಳೂರಿನ ಜೈನ್ ವಿಶ್ವವಿದ್ಯಾನಿಲಯದ ಮಹಿಳಾ ಹಾಗೂ ಪುರುಷರ ತಂಡ ಪ್ರಶಸ್ತಿ ಗೆದ್ದುಕೊಂಡಿದೆ.

ಪುರುಷರ ವಿಭಾಗದ ಫೈನಲ್ ಪಂದ್ಯದಲ್ಲಿ ಜೈನ್ ತಂಡ ಚೆನ್ನೈನ ಹಿಂದೂಸ್ಥಾನ್ ವಿಶ್ವವಿದ್ಯಾನಿಲಯದ ವಿರುದ್ಧ 88-81 ಅಂತರದಲ್ಲಿ ಜಯಗಳಿಸಿ ಪ್ರಶಸ್ತಿ ತನ್ನದಾಗಿಸಿಕೊಂಡಿತು. ವನಿತೆಯರ ವಿಭಾಗದಲ್ಲಿ ಚೆನ್ನೈನ ವೈಷ್ಣವ್ ವಿಶ್ವವಿದ್ಯಾನಿಲಯದ ವಿರುದ್ಧ ಜೈನ್ ತಂಡ 72-64 ಅಂತರದಲ್ಲಿ ಗೆದ್ದು ಪ್ರಶಸ್ತಿ ಮುಡಿಗೇರಿಸಿಕೊಂಡಿತು.

ವಿಜೇತ ತಂಡ 10,000 ರೂ. ನಗದು ಬಹುಮಾನ ಪಡೆಯಿತು. ಜೈನ್ ಕಾಲೇಜಿನ ಪುರುಷರ ತಂಡದ ವಿಷು ಪಿ. ಹಾಗೂ ವನಿತೆಯರ ತಂಡದ ಸಿಮೊನೆಲ್ ಶ್ರೇಷ್ಠ ಆಟಗಾರರ ಗೌರವಕ್ಕೆ ಪಾತ್ರರಾದರು. ಕಳೆದ 1 ತಿಂಗಳಿಂದ ಜೈನ್ ವಿವಿ ಮಹಿಳಾ ತಂಡ ಅಖಿಲ ಭಾರತ ಮಟ್ಟದಲ್ಲಿ ಸತತ 3ನೇ ಪ್ರಶಸ್ತಿ ಗೆದ್ದು ದಾಖಲೆ ಬರೆದಿದೆ. ವಿಜೇತ ತಂಡಕ್ಕೆ ಕಾಲೇಜಿನ ಕ್ರೀಡಾ ವಿಭಾಗದ ನಿರ್ದೇಶಕ ಡಾ. ಶಂಕರ್ ಯು.ವಿ. ಅಭಿನಂದನೆ ಸಲ್ಲಿಸಿದ್ದಾರೆ.